21

ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 05/03/2020

# ಸಂವಿಧಾನದ ಆಶಯಕ್ಕೆ ನುಡಿ ತೋರಣ




- ವಿಧಾನಸಭೆಯಲ್ಲಿ ಗಂಭೀರ ಚರ್ಚೆ
- ವರ್ತಮಾನದ ಚೌಕಟ್ಟಿನಲ್ಲಿ ವಿಶ್ಲೇಷಣೆ
- ಚಕಮಕಿಗೆ ಉಭಯ ಸದನ ಸಾಕ್ಷಿ
- ಸದಸ್ಯರ ಕಾಡಿದ ಕೋವಿಡ್ ಭೀತಿ

ಬೆಂಗಳೂರು: ಬುಧವಾರ ಕೆಳಮನೆಯಲ್ಲಿ ಸಂವಿಧಾನದ ಆಶಯದ ಹಿನ್ನೆಲೆಯಲ್ಲಿ ಗಂಭೀರ ಚರ್ಚೆ ನಡೆಯಿತು. ಮೇಲ್ಮನೆ ಕೋವಿಡ್-19 ವೈರಸ್ ಬಗ್ಗೆ ಸಾರ್ವಜನಿಕರ ಕಳವಳಕ್ಕೆ ಧ್ವನಿಯಾಯಿತು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಅವರ ಬಗ್ಗೆ ಬಿಜೆಪಿ ಶಾಸಕ ಬಸವರಾಜಪಾಟೀಲ್ ಯತ್ನಾಳ್ ಆಡಿದ್ದಾರೆನ್ನಲಾದ ಅವಹೇಳಕಾರಿ ಮಾತು ಸದನದಲ್ಲಿ ಧ್ವನಿಸಿ ಸ್ಪೀಕರ್ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಕಾಂಗ್ರೆಸ್ ಸದಸ್ಯರು ಧರಣಿ ನಡೆಸಿದರು. ಈ ಸಂಬಂಧ ಕಾಂಗ್ರೆಸ್ ನಿಯೋಗ ರಾಜ್ಯಪಾಲರಿಗೂ ದೂರು ನೀಡಿತ್ತು. ನಂತರ ಕಾಂಗ್ರೆಸ್ ಧರಣಿ ಹಿಂಪಡೆದ ಪರಿಣಾಮ ಕಾರ್ಯಕಲಾಪ ಪಟ್ಟಿಯಂತೆ ಸಂವಿಧಾನದ ಬಗ್ಗೆ ಚರ್ಚೆಗೆ ದಾರಿ ಆಯಿತು.

ವೇದ, ಉಪನಿಷತ್ತುಗಳು, ಹಿಂದೂ ಧರ್ಮದ ಸಾರ ಸಂವಿಧಾನದ ರಚನೆಯ ಹಿಂದೆ ಕೆಲಸ ಮಾಡಿದ್ದನ್ನು ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ ಜೆ.ಸಿ.ಮಾಧುಸ್ವಾಮಿ ಸೋದಾರಣವಾಗಿ ಹೇಳಿದರು. ಅವರ ಮಾತಿನಲ್ಲಿ ಧಾರ್ಮಿಕ ಗ್ರಂಥಗಳ ಸಾರವಿತ್ತು. ಸಕಲರ ಕಲ್ಯಾಣವನ್ನು ಸಂವಿಧಾನ ಬಯಸಿದರೂ ಅದನ್ನು ಅರ್ಥಪೂರ್ಣವಾಗಿ ನಾವು ಜಾರಿ ಮಾಡುವಲ್ಲಿ ಸೋತಿದ್ದೇವೆ ಎನ್ನುವುದು ಅವರ ಮಾತಿನ ಅರ್ಥ.

ಕಾಂಗ್ರೆಸ್ ಹಿರಿಯ ನಾಯಕ ಎಚ್.ಕೆ.ಪಾಟೀಲರ ಮಾತಿನಲ್ಲಿ ಇಂದು ಸಂವಿಧಾನೇತರ ಶಕ್ತಿಗಳು ಮೇಲುಗೈ ಸಾಧಿಸುತ್ತಿರುವ ಬಗ್ಗೆ ಕಳವಳ. ನ್ಯಾಯಾಂಗ, ಕಾರ್ಯಾಂಗ, ಶಾಸಕಾಂಗದ ಘನತೆ ಕುಸಿಯುತ್ತಿರುವ ಬಗ್ಗೆ ಆತಂಕ ವ್ಯಕ್ತವಾಯಿತು.

ಬಿಜೆಪಿ ಸದಸ್ಯ ರವಿಕುಮಾರ್ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್.ದೊರೆಸ್ವಾಮಿ ಬಗ್ಗೆ ಆಡಿದ ಮಾತಿಗೆ ತೀವ್ರ ಆಕ್ಷೇಪ. ಆ ಮಾತಿಗಾಗಿ ಕ್ಷಮೆ ಕೇಳಬೇಕು ಎಂದು ಪ್ರತಿಪಕ್ಷದವರ ಪಟ್ಟು. ಬಹಳ ಹೊತ್ತು ಪರಸ್ಪರ ಚಕಮಕಿ. ರಾಜ್ಯದಲ್ಲಿ ಕೋವಿಡ್ ವೈರಸ್ ಹರಡುತ್ತಿದೆಯೇ ಎಂಬ ಭೀತಿ ವ್ಯಕ್ತವಾಯಿತು. ಈ ಸೋಂಕು ಹರಡದಂತೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಸದಸ್ಯರು ಆಗ್ರಹಿಸಿದರು.

ರಾಜ್ಯದಲ್ಲಿ ಅಂತಹ ಭೀತಿಯೇನೂ ಇಲ್ಲ. ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಕೇಂದ್ರದ ನೀತಿಯ ಆಧಾರದ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ಹಣದ ಕೊರತೆ ಇಲ್ಲ ಎಂದು ಸಚಿವ ಡಾ.ಸುಧಾಕರ್ ಸಮಾಧಾನ ಹೇಳಿದರು.